# ಸಮಾಜದ ಮೇಲೆ ಸಿನಿಮಾದ ಪ್ರಭಾವ

**ಅಸ್ಮತ್**

ಉಪನ್ಯಾಸಕರು, ಕನ್ನಡ ವಿಭಾಗ, ಶ್ರೀ ಜೆ. ಸಿ. ಬಿ. ಎಂ ಕಾಲೇಜು, ಶೃಂಗೇರಿ, ಚಿಕ್ಕಮಗಳೂರು.

## ABSTRACT:

ಮನುಷ್ಯ ತನ್ನ ಬದುಕಿನ ಪಯಣದಲ್ಲಿ ಅದ್ಭುತವಾದ ವಸ್ತು, ವಿಷಯಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಅವನ ಕಲ್ಪನಾ ಶಕ್ತಿ, ಪ್ರತಿಭೆ ಇದೆಲ್ಲವು ಜೊತೆಗೂಡಿ ಹುಟ್ಟಿಕೊಂಡ ಮತ್ತೊಂದು ಅದ್ಭುತವೆಂದರೆ ಅದು ಸಿನಿಮಾ. ಮನರಂಜನೆಯ ಉದ್ದೇಶದಿಂದ ಹುಟ್ಟಿಕೊಂಡ ಸಿನಿಮಾವೆಂಬುವುದು ಅದರ ಪರಿಧಿಯನ್ನು ವಿಸ್ತರಿಸಿಕೊಂಡು ಒಂದು ಕಾಲಘಟ್ಟದ ದಾಖಲೆಯಾಗಿ ಸಮಕಾಲೀನ ಪ್ರಜ್ಞೆಯನ್ನು ನಮ್ಮ ಮುಂದಿಡುತ್ತಿದೆ. ಇದರೊಂದಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಮಾಜವನ್ನು ಪ್ರತಿಬಿಂಬಿಸುವ ಮತ್ತು ರೂಪಿಸುವ ಸಾಂಸ್ಕೃತಿಕ ಕಲಾಕೃತಿಯಾಗಿದೆ. ಒಂದು ತಲೆಮಾರನ್ನು ಎಚ್ಚರಿಸುತ್ತಲೇ ಸಮಾಜದ ಬದಲಾವಣೆಗೆ ಸಹಾಯಕವಾಗಿ ಒಂದಷ್ಟು ಪಿಡುಗುಗಳನ್ನು ತೊಲಗಿಸುವ ವೇದಿಕೆಯಾಗಿ ಮಾರ್ಪಾಡಾಗಿದೆ. ಬಹಳ ಮುಖ್ಯವಾಗಿ ಯುವ ಸಮೂಹದ ಮೇಲೆ ಸಿನಿಮಾ ಬೀರುತ್ತಿರುವ ಪ್ರಭಾವವೇನು? ಸಿನಿಮಾ ಕೇವಲ ಮನರಂಜನೆಯ ಮಾಧ್ಯಮವಾಗಿ ಮಾತ್ರ ಉಳಿದಿದೆಯಾ? ನಟ ನಟಿಯರು ಕಲಾವಿದರಾಗಿ ತಮ್ಮ ಜವಬ್ದಾರಿಗಳನ್ನು ಸರಿಯಾಗಿ ನಿರ್ವಹಿಸುತ್ತಿರುವರೇ? ಎಂಬ ವಿಚಾರಗಳ ಜೊತೆಗೆ ಸಿನಿಮಾ ಸಮಾಜದ ಮೇಲೆ ಬೀರುತ್ತಿರುವ ಸಕಾರಾತ್ಮಕ ಮತ್ತು ನಕಾರಾತ್ಮಕ ವಿಚಾರಗಳ ಬಗ್ಗೆ ವಿವರಿಸಲಾಗಿದೆ.

## KEYWORDS:

ಸಮಕಾಲೀನ ಪ್ರಜ್ಞೆ, ಮನರಂಜನೆ, ಪ್ರಚೋದನೆ, ಸಾಂಸ್ಕೃತಿಕ ಪರಿವರ್ತನೆ, ಏಕತಾನತೆ.

ಮನುಷ್ಯನ ಉಗಮದ ಆರಂಭದಿಂದಲೂ ಮನರಂಜನೆಗಾಗಿ ವಿಭಿನ್ನ ಮಾರ್ಗಗಳನು ಹುಡುಕುತ್ತಲೇ ಇದ್ದಾನೆ. ತನ್ನ ದೈನಂದಿನ ಜೀವನದ ಒತ್ತಡದ ನಡುವೆ ಸಣ್ಣ ವಿರಾಮ ಬೇಕಿತ್ತು. ಆಗ ನಾಟಕದಂತಹ ಕಲಾ ಪ್ರಕಾರ ಹುಟ್ಟಿಕೊಂಡಿತ್ತು, ಕಾಲಾ ನಂತರದಲ್ಲಿ ಇದರ ಮುಂದುವರೆದ ರೂಪವಾಗಿ 1895 ರ ಹೊತ್ತಿನಲ್ಲಿ ಚಲನಚಿತ್ರವೆಂಬ ಮಾಯಾ ಜಗತ್ತು ಜನ್ಮತಾಳಿತು. ನೋಡುಗನಿಗೆ ಇದು ಭ್ರಮೆ ಎಂದೆನಿಸಿದರೂ ಅವಾಸ್ತವಿಕ ಎಂದೇನು ಎನಿಸಲಿಲ್ಲ. ಕಪ್ಪು ಬಿಳುಪಿನ ಮೂಕ ಚಿತ್ರಗಳಿಂದ ಆರಂಭವಾಗಿ ಈ ದಿನದವರೆಗೂ ಹಲವಾರು ವಿಷಯಗಳ ಹಿನ್ನೆಲೆಯಲ್ಲಿ ತಂತ್ರಜ್ಞಾನಗಳನ್ನು ಬಳಸಿಕೊಂಡು ಹೆಮ್ಮರವಾಗಿ ಬೆಳೆದಿದೆ. ಸಿನಿಮಾದಲ್ಲಿ

ತೋರಿಸುವುತ್ತಿರುವುದೆಲ್ಲವೂ ಸಮಾಜದಲ್ಲಿದೆ, ಸಮಾಜದಲ್ಲಿ ಇರುವುದನ್ನೇ ಸಿನಿಮಾದಲ್ಲಿ ತೋರಿಸಲಾಗುತ್ತಿದೆ ಎಂಬ ವಾದದ ಜೊತೆಗೆನೇ ನಾವು ಜಗತ್ತನ್ನು ಹೇಗೆ ನೋಡಬೇಕು ಎಂಬುವುದನ್ನು ಪ್ರಭಾವಿಸುವಷ್ಟು ಶಕ್ತಿಶಾಲಿ ಮಾಧ್ಯಮವಾಗಿ ಬೆಳೆದು ನಿಂತಿದೆ. "ಚಲನಚಿತ್ರವೆಂಬುವುದು ಸಮಾಜದ ಕೈಗನ್ನಡಿ" ಇದು ಜನರ ಆಲೋಚನೆಗಳನ್ನು ಪ್ರೇರೇಪಿಸುತ್ತಲೇ ಸಂಸ್ಕೃತಿ, ನೈತಿಕ ಮೌಲ್ಯಗಳು, ರಾಜಕೀಯ ದೃಷ್ಟಿಕೋನಗಳ ಮೇಲೆ ಹಿಡಿತ ಸಾಧಿಸುತ್ತ ನಮ್ಮ ವೈಯಕ್ತಿಕ ನಡವಳಿಕೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಸಾಹಿತ್ಯ ಕೃತಿಗಳಂತೆಯೇ ಸಿನಿಮಾ ಸಹ ಮನುಷ್ಯನ ಭಾವನೆಗಳೊಂದಿಗೆ ಮುಖಾಮುಖಿಯಾಗುವ ಸಾಮರ್ಥ್ಯ ಹೊಂದಿದೆ.

ಜಗತ್ತಿನಾದ್ಯಂತ ಸಿನಿಮಾವೆಂಬುವುದು ಅತ್ಯಂತ ಜನಪ್ರಿಯ ಮನರಂಜನೆಯ ಮೂಲವಾಗಿದೆ. ಪ್ರತಿವರ್ಷ ಹಲವಾರು ಭಾಷೆಗಳಲ್ಲಿ ವಿವಿಧ ವಿಷಯಗಳನ್ನು ಒಳಗೊಂಡು ಚಲನಚಿತ್ರಗಳು ನಿರ್ಮಾಣ ಆಗುತ್ತಿದೆ ಮತ್ತು ವಯಸ್ಸಿನ ಲೆಕ್ಕವಿಲ್ಲದೆ ಜನರು ಇದನ್ನು ತಮ್ಮ ಅಭಿರುಚಿಗೆ ಅನುಗುಣವಾಗಿ ವೀಕ್ಷಿಸುತ್ತಿದ್ದಾರೆ. ಸಿನಿಮಾ ಯಾವುದೇ ಇರಲಿ ಅದು ಕಥೆಗಾರನ, ನಿರ್ದೇಶಕನ ಕಲ್ಪನೆಯ ಕೂಸು ಎನ್ನುವುದನ್ನೂ ಮರೆಯುವಂತಿಲ್ಲ. ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಸಮಾಜದ ಬೆಳವಣಿಗೆಗೆ ಕಾರಣವಾಗುತ್ತದೆ. ಪ್ರೇಕ್ಷಕನಾದವನು ಬುದ್ಧಿವಂತಿಕೆಯಿಂದ ಸಿನಿಮಾವನ್ನು ಆಯ್ಕೆ ಮಾಡಿಕೊಳ್ಳಬೇಕು. ಏಕೆಂದರೆ ಇದನ್ನು ಹಲವಾರು ಆಯಾಮಗಳಿಂದ ಪರಿಶೀಲಿಸಬೇಕಾಗುತ್ತದೆ. ನಿರ್ಮಾಪಕ ಬಂಡವಾಳ ಹಾಕಿದ್ದಾನೆ. ಅವನಿಗೆ ಲಾಭಬೇಕು, ನಟ – ನಟಿಯರಿಗೆ ಹೆಸರು ಹಣಬೇಕು ಇವುಗಳ ಮಧ್ಯದಲ್ಲಿ ಸಮಾಜಕ್ಕೆ ಉಪಯೋಗ ಆಗುವಂತಹ ಕಥೆ ಇದೆಯೇ ಇಲ್ಲವೇ ಎಂಬುವುದು ಕೆಲವೊಮ್ಮೆ ಗೌಣವಾಗುವ ಸಾಧ್ಯತೆ ಇದೆ. ಹಾಗಾಗಿಯೇ ಈ ಹಿಂದೆ ಹೇಳಿದಂತೆ ಪ್ರೇಕ್ಷಕನ ಆಯ್ಕೆ ಮುಖ್ಯವಾಗುತ್ತದೆ. ಇತ್ತೀಚೆಗೆ ಬಿಡುಗಡೆಯಾದ "ಅಡಾಲ್ಸೆನ್ಸ್" ಎಂಬ ಪುಟ್ಟ ವೆಬ್‌ಸರಣಿಯೊಂದು ಚರ್ಚೆಯಲ್ಲಿದೆ, ಇದಕ್ಕೆ ಕಾರಣ 13 ವರ್ಷದ ಬಾಲಕನೊಬ್ಬ ಮೊಬೈಲ್ ಮತ್ತು ಸೋಷಿಯಲ್ ಮೀಡಿಯಾದ ಪ್ರಭಾವಕ್ಕೆ ಬಳಗಾಗಿ ಅವನ ವರ್ತನೆಯಲ್ಲಾಗುವ ಬದಲಾವಣೆ ಸಮಾಜಕ್ಕೆ, ಕುಟುಂಬಕ್ಕೆ ಹೇಗೆ ಮಾರಕವಾಗುತ್ತಿದೆ ಎಂಬುವುದನ್ನು ಕಥೆಯಾಗಿ ಒಳಗೊಂಡಿರುವುದು. ಕೆಲವು ವರ್ಷಗಳಿಂದ ಸಿನಿಮಾವೆಂದರೆ ಹೆಣ್ಣನ್ನು ಕೀಳಾಗಿ ನೆಡೆಸಿಕೊಳ್ಳುವ, ನಟ ಅಹಂಕಾರದಿಂದ ಮೆರೆಯುವ, ಯಾವ ಭಯವು ಇಲ್ಲದೆ ಆನೆ ನಡೆದಿದ್ದೆ ದಾರಿ ಎಂಬಂತೆ ವರ್ತಿಸುವ, ಕಾನೂನನ್ನು ಕೈಗೆತ್ತಿಕೊಳ್ಳುವ, ಅಶ್ಲೀಲತೆಯನ್ನು ಸಾಮಾನ್ಯೀಕರಿಸುವಂತೆ ಚಿತ್ರಿಸುವ ಚಿತ್ರಗಳ ಆರ್ಭಟವೇ ಜೋರಾಗಿರುವ ಕಾಲಘಟ್ಟದಲಿ ಆಡಾಲ್‌ಸೆನ್ಸ್‌ನಂತಹ ಕಥೆಯೋಂದು ಪ್ರೇಕ್ಷಕವರ್ಗವನ್ನು ಸೆಳೆದಿರುವುದು ಮಾತ್ರವಲ್ಲದೆ, ಪೋಷಕರು ತಮ್ಮ ಮಕ್ಕಳ ಮೇಲೆ ನೀಡಬೇಕಾದ ಅನಿವಾರ್ಯತೆಯ ಬಗ್ಗೆ ಎಚ್ಚರಿಸಿತು. ಕನ್ನಡ ಮಾತ್ರವಲ್ಲದೆ ಎಲ್ಲಾ ಭಾಷೆಯ

ಸಿನಿಮಾಗಳಲ್ಲ ಕಥೆಗಿಂತ ಹೀರೋಯಿಸಂಗೆ ಬೆಲೆ ಇರುವಾಗ ಉತ್ತಮ ಅಭಿರುಚಿಯುಳ್ಳ ಕಥೆಗಳು ನೋಡುಗರನ್ನು ಸೆಳೆದು ಸಮಾಜದ ದೃಷ್ಠಿಕೋನಗಳನ್ನು ಬದಲಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. 'ಗಾಯತ್ರಿ ಮುತ್ತು ಸಾಗರ' ಎನ್ನುವ ಸಿನಿಮಾ ವಿಮರ್ಶಕಿಯೊಬ್ಬರು "ನಿಜ ಯಾವಾಗಲಾದರೊಮ್ಮೆ ಸಿನಿಮಾ ನೋಡೋಕೆ ಅಂತಲೇ ಹೊರಗೆ ಹೋಗ್ತಿದಿವ, ಆಮೇಲೆ ಒಳ್ಳೆ ಸಿನಿಮಾ ಅಂತ ಮನೆಯಲ್ಲೇ ಕೂತು ಟಿವಿಯಲ್ಲಿ ನೋಡ್ತಿದ್ವಿ. ಆ ಕಾಲ ಹೋಗಿ ತುಂಬಾ ದಿನಗಳಾಯ್ತು ಈಗೀಗ ಯಾವ ಸಿನಿಮಾನೂ ನೋಡೊ ಇಂಟರೆಸ್ಟ್ ಇಲ್ಲಾ ಕಾರಣ ಹೆಚ್ಚು ಸಿನಿಮಾಗಳಲ್ಲಿ ಹೊಡೆದಾಟ, ಕೆಟ್ಟಾ ಹಾಡಿಗೆ ಕೆಟ್ಟದಾಗಿ ಕುಣಿಯೋ ನೃತ್ಯ" ಎನ್ನುವ ರೀತಿಯಲ್ಲಿ ತಮ್ಮ ಅಸಮಾಧಾನವನ್ನು ಹೊರಹಾಕಿದ್ದಾರೆ. ಬಹುತೇಕ ಇದು ಎಲ್ಲ ತಾಯಂದಿರ ಮನದ ಮಾತು ಸಹ.

**ಸಮಾಜದ ಮೇಲೆ ಸಿನಿಮಾಗಳ ಸಕಾರಾತ್ಮಕ ಪ್ರಭಾವಗಳು:**

**ಸಮಾಜದ ಪ್ರತಿಬಿಂಬ:**

ಚಲನಚಿತ್ರಗಳು ಸಾಮಾನ್ಯವಾಗಿ ನಾವಿರುವ ಸಮಾಜವನ್ನೇ ಪ್ರತಿನಿಧಿಸುತ್ತದೆ. ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಸೈದಾಂತಿಕವಾಗಿ ತಾನು ವಾಸಿಸುತ್ತಿರುವ ಕಾಲಘಟ್ಟದಲ್ಲಿ ತಾನು ಕಂಡಿರುವಂತಹ ವ್ಯಕ್ತಿತ್ವಗಳನ್ನು ಪಾತ್ರಗಳ ಮೂಲಕ ನಿರ್ದೇಶಕ ತೆರೆಯ ಮೇಲೆ ತರುತ್ತಾನೆ. ಇಲ್ಲಿ ನಡೆಯುವ ಸಂಘರ್ಷಗಳು ಪ್ರೀತಿ-ಪ್ರೇಮ, ವಿರಹ, ಕೊಲೆ, ಸುಲಿಗೆ, ಅಧಿಕಾರ, ರಾಜಕೀಯ ಮುಂತಾದ ವಿಷಯಗಳನ್ನು ತನ್ನ ಅನುಭವಕ್ಕೆ ದಕ್ಕಿದಂತೆ ಕಥೆ ಹೆಣೆದು ಪ್ರೇಕ್ಷಕನನ್ನು ತನ್ನ ಕಥೆಯೊಳಗೆ ತಂದುಕೊಳ್ಳುತ್ತಾನೆ. ಜೊತೆಗೆ ಅಸ್ತಿತ್ವದಲ್ಲಿರುವ ನಂಬಿಕೆಗಳನ್ನು ಬಲಪಡಿಸುವ ಜೊತೆಗೆ, ಪ್ರಶ್ನಿಸುವ ಮನೋಭಾವವನ್ನು ಹುಟ್ಟುಹಾಕುತ್ತದೆ. ಸಮಾಜದಲ್ಲಿರುವ ಟೊಳ್ಳು, ಅರ್ಥಹೀನ ಸಂಪ್ರದಾಯಗಳನ್ನು ತಿರಸ್ಕರಿಸುತ್ತಲೇ ಕೊನೆಗೆ ಕುರುಡು ಆಚರಣೆಗಳಿಗೆ ಬಲಿಯಾಗುತ್ತಿರುವ ಅನೇಕ ಹೆಣ್ಣು-ಗಂಡುಗಳ ಬದುಕಿನ ನೈಜ ಕಥೆಯನ್ನು, ಯುನೈಟೆಡ್ ಅರಬ್ ಎಮಿರೇಟ್ಸ್ ದೇಶದಲ್ಲಿ ತೆರೆಕಂಡ ಮೊದಲ ಮರಾಠಿ ಚಿತ್ರವೆಂಬ ಹೆಗ್ಗಳಿಕೆಗೆ ಪಾತ್ರವಾದ 'ಸೈರಾಟ್' ಜಾತಿಯ ಕಾರಣಕ್ಕೆ ಮರ್ಯಾದ ಹತ್ಯೆಯಂತ ಹೀನ ಕೃತ್ಯಗಳಲ್ಲಿ ತೊಡಗುವವರ ಭೀಕರತೆಯನ್ನು ತೆರೆದಿಟ್ಟಿತು. 66ನೇ ಬರ್ಲಿನ್ ಅಂತರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್‌ನಲ್ಲಿ 14+ ವಯೋಮಿತಿಯ ಯುವಪೀಳಿಗೆ ವಿಭಾಗಕ್ಕೆ ನಿರ್ಮಿಸಿದ ಅತಿ ಪ್ರಭಾವಿ ಚಿತ್ರವೆಂದು ಹೆಗ್ಗಳಿಕೆಗೆ ಪಾತ್ರವಾಯಿತು. ಈ ತೆರನಾದ ಹಲವು ಕಥೆಗಳುಳ್ಳ ಹಲವು ಸಿನಿಮಾಗಳನ್ನು ಇಲ್ಲಿ ಉದಾಹರಿಸಬಹುದು. ಸಮಾಜಕ್ಕಂಟಿರುವ ಅನಿಷ್ಟಗಳ ಬಗ್ಗೆ ಮಾತನಾಡುವ ಅವುಗಳನ್ನು ಗುಣಪಡಿಸುವ ಔಷಧಗುಣವಿದೆಯೇ ಎಂದರೆ ಹೌದು ಎಂಬ ಉತ್ತರದೊಂದಿಗೆ ಇದರ ವಿವಿಧ ಆಯಾಮಗಳನ್ನು ಗುರುತಿಸಬೇಕಾಗುತದೆ.

**ಚಿಂತನೆಗಳ ಬದಲಾವಣೆ:**

ಸಿನಿಮಾವೆಂದರೆ ಹೊಳಪು, ಗ್ಲಾಮರ್, ಅಬ್ಬರಗಳು ಮಾತ್ರ ಅಲ್ಲದೆ ಪ್ರಭಾವಶಾಲಿ ಕಥೆಗಳು ಸಮಾಜದ ನೆರಳುಗಳ ಮೇಲೆ ಬೆಳಕು ಚೆಲ್ಲಿ ಬೆಳ್ಳಿಪರದೆಯನ್ನು ಮೀರಿದ ಸಂಭಾಷಣೆಗಳನ್ನೇ ಹುಟ್ಟು ಹಾಕಿ ನಮ್ಮನ್ನು ನಗುವಂತೆ, ಅಳುವಂತೆ, ಚಿಂತಿಸುವಂತೆ ಮಾಡುತ್ತದೆ. ಡಾ. ರಾಜಕುಮಾರ ರವರ ಬಂಗಾರದ ಮನುಷ್ಯ ಎನ್ನುವ ಸಿನಿಮಾ ಹಳ್ಳಿಯನ್ನು ತೊರೆದು ಹೋಗಿದ್ದ ಅನೇಕ ತರುಣರು ಮತ್ತೇ ಹಳ್ಳಿಗೆ ಮರಳಿ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು ಎಂಬುವುದನ್ನು ಕೇಳಿದ್ದೇವೆ. ಕಾಲಕ್ರಮೇಣ ನಂಬಿಕೆಗಳು ಹಾಗೂ ಸಮಾಜದ ಬಗ್ಗೆ ಇರುವ ದೃಷ್ಟಿಕೋನ ಬದಲಾಗುತ್ತದೆ. ಈ ಬದಲಾವಣೆಯಲ್ಲಿ ಚಿತ್ರಗಳು ಬಹುವಾದ ಪ್ರಭಾವ ಬೀರುತ್ತದೆ. ಅಂತೆಯೇ ಸಾಮಾಜಿಕವಾಗಿ ನಾವು ಮಾತನಾಡಲು, ಹೇಳಲು ಹೆದರುವ ಎಷ್ಟೋ ವಿಷಯಗಳನ್ನು ನಿರ್ದೇಶಕ ಸಿನಿಮಾದ ಮೂಲಕ ನಮ್ಮ ಮುಂದೆ ತೆರೆದಿಟ್ಟು ಯುವ ತಲೆಮಾರಿನ ಚಿಂತನೆಯಲ್ಲಿ ಬದಲಾವಣೆ ತಂದಿದೆ. ಕೆಲ ಚಿತ್ರಗಳು ನಿರಾಶೆಯಿಂದ ಕುಗ್ಗಿರುವ ವ್ಯಕ್ತಿಗಳಿಗೆ ಆಶಾದಾಯಕವಾದ ಬಾಗಿಲನ್ನು ತೆರೆದಿಟ್ಟದ್ದು ಸುಳ್ಳಲ್ಲ.

**ಅರ್ಥಿಕ ಮತ್ತು ಉದ್ಯೋಗದ ಅವಕಾಶಗಳು:**

ಸಿನಿಮಾವೆಂಬುದುದು ಕಲೆಯ ಅಭಿವ್ಯಕ್ತಿಯೊಂದಿಗೆ ಅನೇಕರ ಬದುಕಿನ ಆಧಾರವಾಗಿದೆ ಯುವ ಪೀಳಿಗೆಗೆ ಈ ಕ್ಷೇತ್ರ ಹೊಸ ಹಾದಿ, ಹೊಸ ಅವಕಾಶಗಳನ್ನು ನೀಡುತ್ತಿದೆ. ಜಾಗತಿಕ ಮಟ್ಟದಲ್ಲಿ ಒಂದು ದೊಡ್ಡ ಕೈಗಾರಿಕ ಉಧ್ಯಮವಾಗಿದ್ದು ಸಾವಿರಾರು ಜನರಿಗೆ ಉದ್ಯೋಗ ನೀಡಿದೆ. ಸಿನಿಮಾ ನಿರ್ಮಾಣ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದಿಂದ ಹಿಡಿದು ಕಲೆಯವರೆಗೆ ಹಲವಾರು ಹಂತಗಳು, ವಿಭಿನ್ನ ಕೌಶಲ್ಯಗಳು ಮತ್ತು ಕೆಲಸದ ಅವಕಾಶಗಳು. ಕಲಾತ್ಮಕ ವಿಭಾಗ, ತಂತ್ರಜ್ಞಾನ ವಿಭಾಗ. ಮಾರ್ಕೆಟೆಂಗ್ ಮತ್ತು ವಿತರಣೆ, ಸಹಾಯಕ ಸಿಬ್ಬಂದಿ ಚಿತ್ರಮಂದಿರದ ಮಾಲೀಕರು, ಟಿಕೆಟ್ ಮಾರಾಟ ಮತ್ತು ಅಲ್ಲಿಯ ಕಾರ್ಮಿಕರು ಇಷ್ಟು ಮಾತ್ರವಲ್ಲದೆ ಪ್ರಮಾಸೋದ್ಯಮ ಹೋಟೆಲ್ ಉದ್ಯಮ ಮತ್ತು ಜನಪ್ರಿಯ ಸಿನಿಮಾಗಳ ಚಿತ್ರೀಕರಣ ಸ್ಥಳಗಳು ಪ್ರವಾಸಿ ತಾಣಗಳಾಗಿ ಮಾರ್ಪಾಡಾಗಿ ಆರ್ಥಿಕ ಬಲ ವರ್ಧನೆಗೆ ಸಹಾಯಮಾಡುತ್ತದೆ. ಮಾಧ್ಯಮಲೋಕವೆಂಬುವುದು ಕನಸಿನ ಲೋಕ ಒಮ್ಮೆಗೆ ಸಾಮಾಜಿಕ ಮನ್ನಣೆ ಮತ್ತು ಒಳ್ಳೆಯ ಸಂಪಾದನೆ ಎರಡನ್ನು ಸಾಧಿಸಿಕೊಳ್ಳಬಹುದು.

ಜಾತ್ಯಾತೀತತೆ, ಲಿಂಗಸಮಾನತೆ, ಶೌಚಾಲಯ ಮಹತ್ವ, ವಿವಾಹ, ಕುಂಟುಂಬ, ನಮ್ಮ ಸಂಸ್ಕೃತಿ, ಭಾಷೆ, ಇತಿಹಾಸ ಮತ್ತು ಕಲೆಗಳನ್ನು ಚಿತ್ರಗಳ ಮೂಲಕ ಮುಂದಿನ ತಲೆಮಾರಿಗೆ ಪರಿಚಯಿಸುವ ಪ್ರೇರಣೆಯಾಗಿ ನಿಂತಿದೆ. ಅಲ್ಲದೇ ಸಹಾನೂಭೂತಿ, ಬಾಂದವ್ಯ, ಪ್ರೀತಿಯಂತಹ ಮೌಲ್ಯಗಳನ್ನು ಚಿತ್ರಗಳು ಉತ್ತೇಜಿಸುತ್ತವೆ.

**ಸಮಾಜದ ಮೇಲೆ ಸಿನಿಮಾದ ನಕಾರಾತ್ಮಕ ಪ್ರಭಾವ**

**ಅಶ್ಲೀಲತೆ ಮತ್ತು ಅಸಭ್ಯ ಭಾಷೆಗಳ ವೈಭವೀಕರಣ:**

ಅಶ್ಲೀಲತೆ ಮತ್ತು ಅಸಭ್ಯಭಾಷೆ ಸಿನಿಮಾದಲ್ಲಿ ಬಳಸುವುದರ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಇದನ್ನು ಕೆಲವರು ಕಲಾತ್ಮಕ ಅಭಿವ್ಯಕ್ತಿಯ ಭಾಗವೆಂಬಂತೆ ಪರಿಗಣಿಸುತ್ತಿರುವುದು ಶೋಚನೀಯ. ಇತ್ತೀಚೆಗೆ ಬಿಡುಗಡೆಗೊಂಡು ಯಶಸ್ಸು ಪಡೆದ ಅನಿಮಲ್ ಎಂಬ ಸಿನಿಮಾ ಅಶ್ಲೀಲತೆಯ ಪರಾಕಾಷ್ಠೆಯನ್ನು ತಲುಪಿದೆ ಎಂದು ಹಲವಾರು ಮಾಧ್ಯಮಗಳು, ಬುದ್ದಿಜೀವಿಗಳು, ಮಹಿಳೆಯರು ವಿರೋಧ ವ್ಯಕ್ತಪಡಿಸುತ್ತಿದ್ದರೂ ಆ ಸಿನಿಮಾ ಬಹುಕೋಟಿಗೂ ಅಧಿಕ ಲಾಭವನ್ನು ಪಡೆದುಕೊಂಡಿದೆ. ಇದು ಹೇಗೆ ಸಾಧ್ಯವೆಂದು ಗಮನಿಸಿದರೆ ಈ ತೆರನಾದ ವಸ್ತು ವಿಷಯಗಳು ಯುವ ಮನಸ್ಸುಗಳಿಗೆ ಶೀಘ್ರವಾಗಿ ಆಕರ್ಷಣೆಯನ್ನು ಉಂಟುಮಾಡಿ ತಪ್ಪಾದ ಸಂಸ್ಕಾರ ರೂಪುಗೊಳ್ಳುವಂತೆ ಮಾಡುತ್ತದೆ. ಭಾಷೆ ಮತ್ತು ವರ್ತನೆ ಎಂಬುವುದು ನಮ್ಮ ಸಂಸ್ಕೃತಿಯ ಪ್ರತಿಬಿಂಬವೆಂದು ಹೇಳುತ್ತಿದ್ದರೂ ಸಿನಿಮಾದಲ್ಲಿ, ಬಳಸಲಾಗುವ ಪದಗಳನ್ನು ಸಾಮಾನ್ಯೀಕರಿಸಿಕೊಂಡು ವಯಸ್ಸಿನ ಹಂಗಿಲ್ಲದೆ ಬಳಸಲಾಗುತ್ತದೆ. ಪ್ರಾದೇಶಿಕ ಸಿನಿಮಾಗಳು ಸಹ ಹಿಂದಿ ಸಿನಿಮಾಗಳ ಜೊತೆಗಿನ ಸ್ಪರ್ದೆಯಲ್ಲಿ ತಮ್ಮ ಮಿತಿಯನ್ನು ಮೀರಿ ವರ್ತಿಸುತ್ತಿದೆ.

**ಮಹಿಳೆಯನ್ನು ಭೋಗದ ವಸ್ತುವಾಗಿ ತೋರಿಸುವುದು:**

ಸಿನಿಮಾರಂಗವೆಂದರೆ ಅದು ಪುರುಷ ಪಾರುಪತ್ಯವಿರುವ ಕ್ಷೇತ್ರ ಅಲ್ಲಿ ಹೀರೋಗಳಿಗೆ ಪ್ರಾತಿನಿಧ್ಯವಿರುವಷ್ಟು ಮಹಿಳೆಯರಿಗೆ ಇರುವುದಿಲ್ಲ. ಕಥೆಗಳು ಸಹ ನಾಯಕ ನಟನನ್ನು ಕೇಂದ್ರೀಕರಿಸಿಯೇ ಹೆಣೆಯಲ್ಪಡುತ್ತದೆ. ನಾಯಕಿ ಸ್ನಾನ ಮಾಡುವಾಗ ಅವಳ ಅರಿವಿಗೆ ಬಾರದೇ, ಒಪ್ಪಿಗೆ ಇಲ್ಲದೆ ನಾಯಕ ಇಣುಕಿ ನೋಡುವುದು, ಪ್ರೀತಿಸಲು ಒತ್ತಾಯಿಸುವ ವಿಭಿನ್ನ ಮಾರ್ಗಗಳು ಕೊನೆಗೆ ಆಕೆ ಪ್ರೀತಿಸುತ್ತೇನೆ ಎಂದು ಒಪ್ಪಿಗೆ ನೀಡುವವರೆಗೂ ಆಕೆಯನ್ನು ಹಿಂಬಾಲಿಸುವುದು, ಹೆಂಡತಿಯ ನಡವಳಿಕೆಯನ್ನು ಸರಿಪಡಿಸಲು ಹೊಡೆಯುವುದು ಇವೆಲ್ಲವುಗಳನ್ನು ಸಾಮಾನ್ಯವಾಗಿ ಹಾಸ್ಯ ಅಥವಾ ಪ್ರಣಯ ಎಂಬಂತೆ ತೋರಿಸುವುದರಿಂದ ಆರಂಭವಾಗಿ ಮಹಿಳೆಯರ ಪಾತ್ರವನ್ನು ಕೇವಲ ಆಕರ್ಷಣೆ ಮತ್ತು ಕಾಮೋದ್ದೀಪನೆಗೆ ಸೀಮಿತಗೊಳಿಸಿ ನಾಯಕಿಗೆ ಧೈರ್ಯ, ಬುದ್ಧಿವಂತಿಕೆ, ಸ್ವತಂತ್ರ ಮನೋಭಾವ ಮುಂತಾದ ಗುಣಗಳಿಗಿಂತ ದೇಹದ ಸೌಂದರ್ಯವೆ ಮುಖ್ಯ ಎಂಬಂತೆ ಚಿತ್ರಿಸುತ್ತಿರುವುದು ಹೆಣ್ಣಿನ ಘನತೆಗೆ ಧಕ್ಕೆಯನ್ನು ಉಂಟುಮಾಡುತ್ತದೆ. ಪಿಂಕ್, ತಪ್ಪಡ್, ಗುಲಾಬಿ ಟಾಕೀಸ್ ಮುಂತಾದ ಪ್ರಗತಿಪರ ಸಿನಿಮಾಗಳಿದ್ದರು ಅವುಗಳನ್ನು ನೋಡುವಂತಹವರ ಸಂಖ್ಯೆ ಕಡಿಮೆ ದ್ವಿತೀಯ ದರ್ಜೆಯ ಸಿನಿಮಾಗಳನ್ನು ನೋಡಿ ಗಂಡು ತನ್ನನ್ನೇ ತಾನು ಶ್ರೇಷ್ಟ ಎಂದು ಭಾವಿಸುವುದಲ್ಲದೆ ತನ್ನ ಮನೆಯ ಹೆಣ್ಣುಗಳನ್ನು

ಇದೇ ರೀತಿಯಾಗಿ ಹಿಡಿತಕ್ಕೆ ತೆಗೆದುಕೊಳ್ಳಬೇಕೆಂಬ ಅಪಾಯದ ಭಾವನೆಯನ್ನು ಮೂಡಿಸುತ್ತದೆ.

**ಅವಾಸ್ತವಿಕತೆ ಅಥವಾ ಭ್ರಮೆಯ ಭಿತ್ತುವಿಕೆ:**

ಸಿನಿಮಾದಲ್ಲಿ ಕೀಚಕನಂಥ ಎದುರಾಳಿಯನ್ನು ಹಿಗ್ಗಾಮುಗ್ಗಾ ಚಚ್ಚಿ ಮಣ್ಣು ಮುಕ್ಕಿಸುವ, ತೆರೆಯ ಮೇಲೆ ಮೂವತ್ತು ಜನರನ್ನು ಒಬ್ಬನೇ ಹೊಡೆಯುವ ಸನ್ನಿವೇಶಗಳು ನೋಡಲು ರೋಚಕವಾಗುತ್ತದೆ. ಆದರೆ ವಾಸ್ತವ ಬೇರೆಯೇ ಎಂಬುದನ್ನು ಪ್ರೇಕ್ಷಕ ಪ್ರಭು ಅರ್ಥ ಮಾಡಿಕೊಳ್ಳುವುದರಲ್ಲಿ ಎಡವುತ್ತಿದ್ದಾನೆ. ಹೀರೋ ಆದವನು ಶಿಕ್ಷಣದ ಅಗತ್ಯವಿಲ್ಲದೆ ಒಂದೇ ಹಾಡಿನಲ್ಲಿ ದೊಡ್ಡ ಉದ್ಯಮ ಸ್ಥಾಪಸಿ ಕೋಟ್ಯಾಧೀಶನಾಗಬಹುದು, ನಿಜ ಜೀವನದಲ್ಲಿ ಇದು ಸಾಧ್ಯವಿಲ್ಲ 'ಲಕ್ಕಿ ಭಾಸ್ಕರ' ಎನ್ನುವ ಸಿನಿಮಾವೊಂದು ಹಣವಿದ್ದರೆ ಮಾತ್ರ ಭಾರತದಂತಹ ದೇಶದಲ್ಲಿ ಗೌರವ ಸಿಗುತ್ತದೆ ಎಂಬ ಡೈಲಾಗ್ ಹೊಡೆದಾಗ ನೋಡುಗರು ಚಪ್ಪಾಳೆಗಳ ಮೂಲಕ ಆ ಡೈಲಾಗ ತಮ್ಮದು ಎಂಬಂತೆ ಭಾವಿಸುತ್ತಿರುವುದು ಕಂಡಿತು. ನಾಯಕ ಬ್ಯಾಂಕನ್ನು ವಂಚಿಸಿ ಕೋಟಿ ಹಣವನ್ನು ಲಾಭ ಮಾಡಿಕೊಂಡು ಶ್ರೀಮಂತನಾಗುತ್ತಾನೆ. ಇದನ್ನು ನೋಡಿದ ಯುವ ಸಮಾಜ ಬೇಗ ಶ್ರೀಮಂತರಾಗುವುದಕ್ಕೆ ಬೇಕಾದ ಮಾರ್ಗವನ್ನು ಹುಡುಕುತ್ತಾರೆ. ಹಣವೊಂದೇ ಗೌರವ ತಂದುಕೊಡುವ ಮಾರ್ಗವೆಂದು ಭಾವಿಸುತ್ತಾರೆ. ಇಂತಹ ಸಿನಿಮಾಗಳು ನೋಡುವುದರಿಂದ ದುಂದುವೆಚ್ಚ, ಸಾಮಾಜಿಕ ಸ್ಪರ್ಧೆಯ ಮನೊಭಾವ, ನೈಜ ಸಂಬಂದಗಳ ಪ್ರಾಮುಖ್ಯತೆ ಅರಿಯದೆ ಹಾದಿ ತಪ್ಪುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ವಾಸ್ತವಿಕತೆ ಇಲ್ಲದ ಜೀವನ ಶೈಲಿ ಚಿತ್ರ ಮಾಧ್ಯಮದ ಆಕರ್ಷಕ ತಂತ್ರ ಆದರೆ ಇದರ ಪರಿಣಾಮ ಮಾತ್ರ ಸಮಾಜದ ಮೇಲೆ ದೀರ್ಘಕಾಲೀನ ಮತ್ತು ಅಪಾಯಕಾರಿ. ಒಟ್ಟಾರೆಯಾಗಿ "ಹಣಕೊಟ್ಟು ರೋಗ ತರಿಸಿಕೊಳ್ಳುವಷ್ಟು ದಡ್ಡರಲ್ಲ ಪ್ರೇಕ್ಷಕರು" ಇದನ್ನು ಚಿತ್ರರಂಗ ಅರ್ಥಮಾಡಿಕೊಳ್ಳಬೇಕಾಗಿದೆ. ಸಿನಿಮಾದಲ್ಲಿ ನಾಯಕ, ನಾಯಕಿ ಯಾಗಿರುವವರು ನಿಜ ಜೀವನದಲ್ಲಿ ಹಾಗೇ ಇರುತ್ತಾರೆ ಮತ್ತು ಇರಬೇಕೆಂಬ ಭ್ರಮೆಯಿಂದ ಪ್ರೇಕ್ಷಕನಾದವನು ಹೊರಬರಬೇಕಾಗಿದೆ. ಸಿನಿಮಾಗಳ ಕಥಾವಸ್ತು ನೈಜತೆಗೆ ಹತ್ತಿರವಾಗಿರಬೇಕು ಎನ್ನುವ ಸೈದ್ಧಾಂತಿಕ ಚೌಕಟ್ಟಿನಿಂದ ನಮ್ಮ ಬಹುಪಾಲು ನಿರ್ದೇಶಕರು, ನಿರ್ಮಾಪಕರು ಹೊರಬಂದಾಗಿದೆ, ಮನರಂಜನೆಯನ್ನು ಒದಗಿಸಬೇಕು ಲಾಭ ಮಾಡಬೇಕು ಎನ್ನುವ ಹಿನ್ನಲೆಯಲ್ಲಿ ಲಾಜಿಕ್ಕೇ ಇಲ್ಲದ ಸಿನಿಮಾಗಳು ಚಿತ್ರಮಂದಿರಕ್ಕೆ ಬರುತ್ತಿವೆ. ಏನಾದರೂ ಆಯ್ಕೆ ಮಾತ್ರ ನಮ್ಮದೇ ಉತ್ತಮ ಸಂದೇಶಗಳನ್ನು ನೀಡುವ ಜನರನ್ನೇ ಚಿಂತನೆಗೆ ತೊಡಗಿಸುವ ಸಮಾಜದ ಅನಿಷ್ಟಗಳನ್ನು ತೊಲಗಿಸಿ ಬದಲಾವಣೆ ತರಬಹುದಾದ ಸಿನಿಮಾಗಳು ಹೆಚ್ಚೆಚ್ಚು ಬರಲಿ, ಅವು ಗೆಲ್ಲಲ್ಲಿ ಆಗ ಮಾತ್ರ ಸಮಾಜದ ಒಳಿತು ಮತ್ತು ಮನರಂಜನೆ ಇವೆರಡಕ್ಕು ನ್ಯಾಯ ಒದಗಿಸಿದಂತಾಗುತ್ತದೆ.

## ಪರಾಮರ್ಶನ ಗ್ರಂಥಗಳು:

1. ಪುಟ್ಟಸ್ವಾಮಿ ಕೆ. , (2009), ಸಿನಿಮಾ ಯಾನ, ಹಸಿರು ಪ್ರಕಾಶನ, ಬೆಂಗಳೂರು.
2. ವಿಠ್ಠಲ್‌ರಾವ್, (2022), ಕನ್ನಡ ಸಿನಿಮಾ ಹೊಸ ಅಲೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
3. ಶಂಕರ್ ಎನ್. ಎಸ್. , (2018), ಚಿತ್ರಕಥೆ ಹಾಗೆಂದರೇನು? ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.